## ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ)ರವರ ಕಛೇರಿ, ಕಲಬುರಗಿ

ಸಂಖ್ಯೆ : ಅ2/ಆಡಳಿತ/ಪ್ರಾಶಾಶಿ/ಪ್ರೌಶಾಶಿ/ಬಡ್ತಿ/ಗ್ರೇಡ್-2/70/2019-20 ದಿನಾಂಕ: 29-08-2020

### ಅಧಿಸೂಚನೆ

**ವಿಷಯ :-** **ಕಲಬುರಗಿ ಜಿಲ್ಲೆಯಲ್ಲಿ ತರಬೇತಿ ಹೊಂದಿದ ಪದವಿಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡುವ ಕುರಿತು.**

**ಉಲ್ಲೇಖ :-**
**1. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 13-07-2020**
**2. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 13-08-2020**
**3. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 28-08-2020**

ಕಲಬುರಗಿ ಜಿಲ್ಲೆಯಲ್ಲಿ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಜೇಷ್ಠತಾ ಪಟ್ಟಿಯನ್ನು ಈಗಾಗಲೇ ದಿನಾಂಕ: 15-06-2020 ರಂದು ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಮೂಲ ದಾಖಲೆಗಳ ಪರಿಶೀಲನೆಯ ಷರತ್ತಿಗೆ ಒಳಪಟ್ಟು ಪ್ರಕಟಿಸಲಾಗಿದೆ. ಕಲಬುರಗಿ ಜಿಲ್ಲೆಯಲ್ಲಿ 2015ನೇ ಸಾಲಿನಲ್ಲಿ 2014ನೇ ಬ್ಲಾಕ್ ಅವಧಿಯ ವರೆಗೆ ಬಡ್ತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ.

ಕಲಾ ಕನ್ನಡ ಮಾಧ್ಯಮ ಹಾಗೂ ಕಲಾ ಉರ್ದು ಮಾಧ್ಯಮ ಮತ್ತು ಉರ್ದು ಭಾಷಾ ವಿಷಯದಲ್ಲಿ ಹೆಚ್ಚುವರಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ 2012ನೇ ಬ್ಲಾಕ್ ಅವಧಿಯಿಂದ 2014ನೇ ಬ್ಲಾಕ್ ಅವಧಿಯವರೆಗೆ ಆಯಾ ವಿಷಯಗಳಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳಿಗೆ ಬಡ್ತಿ ನೀಡಲು ಸಾಧ್ಯವಾಗಿರುವದಿಲ್ಲ. ಮುಂದುವರೆದು 2012ನೇ ಬ್ಲಾಕ್ ಅವಧಿಯಲ್ಲಿ ಕನ್ನಡ ಭಾಷಾ ವಿಷಯದ (03) ಉಳಿದ ಮೂಲ ವೃಂದದ ಹುದ್ದೆಗಳನ್ನು 2013ನೇ ಬ್ಲಾಕ್ ಅವಧಿಯಲ್ಲಿ ಆಂಗ್ಲ ಭಾಷಾ ವಿಷಯದಲ್ಲಿ ಸ್ಥಳೀಯ ವೃಂದದ (01) ಹುದ್ದೆಯನ್ನು, 2014ನೇ ಬ್ಲಾಕ್ ಅವಧಿಯಲ್ಲಿ ಕನ್ನಡ ಭಾಷಾ ವಿಷಯದಲ್ಲಿ ಸ್ಥಳೀಯ ವೃಂದದ (04) ಹಾಗೂ ಉಳಿದ ಮೂಲ ವೃಂದದ (01) ಹುದ್ದೆಯನ್ನು ಮತ್ತು ಆಂಗ್ಲ ಭಾಷೆಯಲ್ಲಿ ಸ್ಥಳೀಯ ವೃಂದದ (02) ಹುದ್ದೆಗಳು ಕಾರಣಾಂತರಗಳಿಂದ ಬಡ್ತಿ ಮೂಲಕ ಭರ್ತಿಮಾಡಲು ಸಾಧ್ಯವಾಗಿರುವದಿಲ್ಲ.

2015ನೇ ಬ್ಲಾಕ್ ಅವಧಿಯಿಂದ 2019ನೇ ಬ್ಲಾಕ್ ಅವಧಿಯವರೆಗೆ ಉದ್ಭವಿಸಿದ ಹುದ್ದೆಗಳನ್ನು ಗುರುತಿಸಿ ವೃಂದ ಹಾಗೂ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಲಾದ ಅನುಪಾತದಂತೆ ಬಡ್ತಿಗಾಗಿ ಕಾಯ್ದಿರಿಸಲಾದ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದೆ. ಬಡ್ತಿಗಾಗಿ ಕಾಯ್ದಿರಿಸಲಾದ ಹುದ್ದೆಗಳ ತಾತ್ಕಾಲಿಕ ವಿವರಗಳನ್ನು ಉಲ್ಲೇಖ (01) ರ ಅಧಿಸೂಚನೆಯ ಮೂಲಕ ಪ್ರಕಟಿಸಲಾಗಿದ್ದು ಅಂತಿಮ ವಿವರಗಳು **ಅನುಬಂಧ -1** ರಂತೆ ಉಲ್ಲೇಖ (02) ರ ಮೂಲಕ ಪ್ರಕಟಿಸಲಾಗಿದೆ.

ಕಲಾ ಕನ್ನಡ ಮಾಧ್ಯಮ ವಿಷಯದಲ್ಲಿ ಪ್ರಸಕ್ತವಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 2012, ರಿಂದ 2017 ರವರೆಗಿನ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳಿಗೆ ಮಾತ್ರ ಪ್ರಸಕ್ತವಾಗಿ ಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಇರುತ್ತದೆ. ಅದರಂತೆ 2018 ಹಾಗೂ 2019 ನೇ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳನ್ನು ಸದರಿ ವಿಷಯದಲ್ಲಿ ಮುಂಬರುವ ದಿನಗಳಲ್ಲಿ ಹುದ್ದೆಗಳು ಖಾಲಿಯಾದಲ್ಲಿ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು.

ಕಲಾ ಉರ್ದು ಮಾಧ್ಯಮ ವಿಷಯದಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳಲ್ಲಿ ಬಡ್ತಿ ನೀಡಲು ಪ್ರಸಕ್ತವಾಗಿ ಖಾಲಿ ಹುದ್ದೆಗಳು ಲಭ್ಯವಿರುವದಿಲ್ಲ. ಅದರಂತೆ ಸದರಿ ವಿಷಯದಲ್ಲಿ ಮುಂಬರುವ ದಿನಗಳಲ್ಲಿ ಹುದ್ದೆಗಳು ಖಾಲಿಯಾದ ನಂತರ ಬಡ್ತಿ ನೀಡಲಾಗುವುದು.

ಭೌತ ವಿಜ್ಞಾನ ಹಾಗೂ ಜೀವ ವಿಜ್ಞಾನ ಉರ್ದು ಮಾಧ್ಯಮ ವಿಷಯದಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳಲ್ಲಿ ಬಡ್ತಿ ನೀಡಲು ಪ್ರಸಕ್ತವಾಗಿ ಖಾಲಿ ಹುದ್ದೆಗಳು ಲಭ್ಯವಿರುವದಿಲ್ಲ. ಅದರಂತೆ ಸದರಿ ವಿಷಯದಲ್ಲಿ ಮುಂಬರುವ ದಿನಗಳಲ್ಲಿ ಹುದ್ದೆಗಳು ಖಾಲಿಯಾದ ನಂತರ ಬಡ್ತಿ ನೀಡಲಾಗುವುದು.

ಉರ್ದು ಭಾಷಾ ವಿಷಯದಲ್ಲಿ ಪ್ರಸಕ್ತವಾಗಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ 2012ನೇ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳಿಗೆ ಮಾತ್ರ ಪ್ರಸಕ್ತವಾಗಿ ಬಡ್ತಿ ಮೂಲಕ ಭರ್ತಿ ಮಾಡಲು ಅವಕಾಶ ಇರುತ್ತದೆ. ಅದರಂತೆ 2017 ಹಾಗೂ 2018 ನೇ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳನ್ನು ಸದರಿ ವಿಷಯದಲ್ಲಿ ಮುಂಬರುವ ದಿನಗಳಲ್ಲಿ ಹುದ್ದೆಗಳು ಖಾಲಿಯಾದಲ್ಲಿ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು.

ಹಿಂದಿ ಭಾಷಾ ವಿಷಯದಲ್ಲಿ ಬಡ್ತಿಗಾಗಿ ನಿಗದಿಪಡಿಸಲಾದ ಹುದ್ದೆಗಳ ಬಡ್ತಿ ಪ್ರಕ್ರಿಯೆಯನ್ನು ಕಾರಣಾಂತರಗಳಿಂದ ಸ್ಥಗಿತಗೊಳಿಸಲಾಗಿದ್ದು ನಂತರ ಬಡ್ತಿ ಪ್ರಕ್ರಿಯೆಯನ್ನು ಮುಂದುವರೆಸಲಾಗುವುದು.

ಅದರಂತೆ ಆಯಾ ಬ್ಲಾಕ್ ಅವಧಿಗಳಲ್ಲಿ ಪ್ರಕಟಿಸಲಾದ ಜೇಷ್ಠತಾ ಪಟ್ಟಿಗಳಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರುಗಳಿಗೆ ಆಯಾ ಬ್ಲಾಕ್ ಅವಧಿಯಲ್ಲಿ ಉದ್ಭವಿಸಿದ ಹುದ್ದೆಗಳ ಪೈಕಿ ಬಡ್ತಿಗಾಗಿ ನಿಗದಿಪಡಿಸಲಾದ ಅನುಪಾತದಂತೆ ಹಾಗೂ ಪ್ರಚಲಿತ ಮೀಸಲಾತಿ ರೋಸ್ಟರ್ ಬಿಂದುಗಳಂತೆ ಗುರುತಿಸಿ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು 1 : 2 ಅನುಪಾತದಲ್ಲಿ ಸಿದ್ಧಪಡಿಸಿ ಉಲ್ಲೇಖ (01) ರ ಅಧಿಸೂಚನೆಯ ಮೂಲಕ ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯನ್ನು ನಡೆಸಿ ಸದರಿ ಶಿಕ್ಷಕರುಗಳ ಪೈಕಿ ಬಡ್ತಿಯನ್ನು ನಿರಾಕರಿಸಿದ ಶಿಕ್ಷಕರ ಬದಲಾಗಿ, ಜೇಷ್ಠತಾ ಪಟ್ಟಿಯಲ್ಲಿ ಇವರುಗಳ ಕೆಳಗೆ ಸ್ಥಾನ ಪಡೆದುಕೊಂಡಿರುವ ಶಿಕ್ಷಕರ ಮೂಲ ಸೇವಾ ಪುಸ್ತಕ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ನಂತರ ಉಲ್ಲೇಖ (02) ರನ್ವಯ 1 : 1 ಅನುಪಾತದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರಿಗೆ ಈ ಕುರಿತು ಏನಾದರು ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 20-08-2020 ರವರೆಗೆ ಖುದ್ದಾಗಿ ಈ ಕಛೇರಿಗೆ ಹಾಜರಾಗಿ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಲು ಕಾಲಾವಕಾಶವನ್ನು ನೀಡಲಾಗಿತ್ತು.

ಅದರಂತೆ ಸದರಿ 1 : 1 ಅನುಪಾತದ ತಾತ್ಕಾಲಿಕ ಅರ್ಹತಾ ಪಟ್ಟಿಗೆ ಸಲ್ಲಿಸಲಾಗಿರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಹಾಗೂ ಸದರಿ ಪಟ್ಟಿಯಲ್ಲಿ ಹೊಸದಾಗಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲಿಸಿದ ನಂತರ ಮತ್ತು ಇವರುಗಳಲ್ಲಿ ಬಡ್ತಿಯನ್ನು ನಿರಾಕರಿಸಿದ ಶಿಕ್ಷಕರ ಸ್ಥಾನದಲ್ಲಿ ಆಯಾ ಬ್ಲಾಕ್ ಅವಧಿಯ ಜೇಷ್ಠತಾ ಪಟ್ಟಿಯಲ್ಲಿ ಅವರ ಕೆಳಗೆ ಸ್ಥಾನ ಪಡೆದುಕೊಂಡಿರುವ ಶಿಕ್ಷಕರನ್ನು ಬಡ್ತಿಗಾಗಿ ಪರಿಗಣಿಸಿ ಈ ಮೂಲಕ ಬ್ಲಾಕ್ ವಾರು ತಾತ್ಕಾಲಿಕ ಅಂತಿಮ ಅರ್ಹತಾ ಪಟ್ಟಿಗಳನ್ನು **ಅನುಬಂಧ 1 ರಿಂದ ಅನುಬಂಧ -8** ರವರೆಗೆ ಪ್ರಕಟಿಸಲಾಗಿದೆ.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ,
ಕಲಬುರಗಿ

ಪ್ರತಿಯನ್ನು :-

1. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3. ಕಛೇರಿಯ ವೆಬ್ ಸೈಟ ದಲ್ಲಿ ಪ್ರಕಟಣೆಗಾಗಿ